# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 20-12-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಡಿಸೆಂಬರ್ 1–20 ರ ತನಕದ ಮಲೇಶಿಯಾದ ಪಾಮೆಣ್ಣೆ ರಫ್ತು 4 ಶೇಕಡಾ ಇಳಿಕೆ

ಡಿಸೆಂಬರ್ 2022 ರ 1–20 ರ ತನಕ ಮಲೇಶಿಯಾದ ಪಾಮೆಣ್ಣೆ ರಫ್ತು ಹಿಂದಿನ ತಿಂಗಳ ಇದೇ ಅವಧಿಗಿಂತ 4 ಶೇಕಡಾ ಇಳಿಕೆಯಾಗಿ 952,592 ಟನ್‌ಗಳಾಗಿವೆಯೆಂದು ಇಂಟರ್‌ಟೆಕ್ ಸರ್ವಿಸಸ್ ಕಾರ್ಗೋ ಸರ್ವೆಯರ್ ವರದಿ ಮಾಡಿದೆಯೆನ್ನಲಾಗಿದೆ. ಹಿಂದಿನ ವಾರದ ರಫ್ತು ಗಣನೀಯ ಇಳಿಕೆಯಾಗಿ ಮಾರ್ಚ 2022 ರ ನಂತರದ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಹೆಚ್ಚಳ ಕಂಡಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಬೇಡಿಕೆ ಇಳಿಕೆಯಿಂದ ಟನ್‌ಗೆ 46 ರಿಂಗಿಟ್ಸ್ 1.17 ಶೇಕಡಾ ಇಳಿಕೆಯಾಗಿ 3883 ರಿಂಗಿಟ್ಸ್ ($ 876.13) ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ.

## 2022 ಎಪ್ರಿಲ್–ನವೆಂಬರ್ ಅವಧಿಯಲ್ಲಿ ಭಾರತದ ಎಣ್ಣೆ ಹಿಂಡಿ ರಫ್ತು 50 ಶೇಕಡಾ ಹೆಚ್ಚಳ

2022–23 ನೇ ಸಾಲಿನಲ್ಲಿ ಭಾರತದಿಂದ ಒಟ್ಟು ಎಣ್ಣೆ ಹಿಂಡಿ ರಫ್ತು ಹಿಂದಿನ ಸಾಲಿನ ಇದೇ ಅವಧಿಯಲ್ಲಿದ್ದ 15.96 ಲಕ್ಷ ಟನ್‌ಗಳಿಂದ 50 ಶೇಕಡಾ ಹೆಚ್ಚಳಗೊಂಡು 23.92 ಲಕ್ಷ ಟನ್‌ಗಳಾಗಿವೆಯೆಂದು ಸೆಅ ದತ್ತಾಂಶ ಪ್ರಕಟಪಡಿಸಿದೆ. 2021 ರ ನವೆಂಬರ್‌ನಲ್ಲಿದ್ದ 1.63 ಲಕ್ಷ ಟನ್ ರಫ್ತು 2022 ನವೆಂಬರ್‌ನಲ್ಲಿ 4.07 ಲಕ್ಷ ಟನ್‌ಗಳಿಗೇರಿದೆ. ಹಿಂದಿನ ವರ್ಷ ಈ ಅವಧಿಯ 7 ಲಕ್ಷ ಟನ್ ರಫ್ತಾಗಿದ್ದ ಸಾಸಿವೆ ಹಿಂಡಿ ಈ ವರ್ಷ 14.76 ಲಕ್ಷ ಟನ್‌ಗಳಿಗೇರಿದೆ. ಈ ಹಿಂದೆ 2011–12 ರಲ್ಲಿ 12.48 ಲಕ್ಷ ಟನ್ ರಫ್ತು ಅತಿ ಹೆಚ್ಚಿನ ದಾಖಲೆಯಾಗಿತ್ತು. ಈ ಅವಧಿಯ ಸೋಯಾಮೀಲ್ ರಫ್ತು 3.26 ಲಕ್ಷ ಟನ್‌ಗಳಿಗೇರಿದ್ದು, ಈ ವರ್ಷ ನವೆಂಬರ್‌ನಲ್ಲಿ 1.64 ಲಕ್ಷ ಟನ್‌ಗಳು ಹಾಗೂ 2021 ನವೆಂಬರ್‌ನಲ್ಲಿ 42000 ಟನ್ ಸೋಯಾ ಮೀಲ್ ರಫ್ತಾಗಿತ್ತೆನ್ನಲಾಗಿದೆ.